ಇದರಿಂದ ಜನಸಾಮಾನ್ಯರಿಗೆ ತೊಂದರೆ. ಬೇರೆಲ್ಲೂ ಸಿಕ್ಕದ ಪಶ್ಚಿಮ ಘಟ್ಟದ ಪ್ರಕೃತಿ ಸೌಂದರ್ಯ ಸವಿಯಲು, ಸುಬ್ರಮಣ್ಯ ಬೇಲೂರು ನೋಡಲು ಒಂದು ಹಗಲು ಪ್ರಯಾಣದ ಟ್ರೈನ್ ಬೇಕು, ಹಾಗೂ ಬೆಂಗಳೂರಿಗೆ ರಾತ್ರಿ ಇನ್ನೊಂದು ಟ್ರೈನ್ ವ್ಯವಸ್ಥೆ ಮಾಡಬೇಕು. ಟ್ರೈನ್ ಪ್ರಯಾಣದ ವೇಳೆ ಕಡಿಮೆ ಮಾಡಬೇಕು. ಕಡಿಮೆ ವೇಳೆಯಲ್ಲಿ ಪ್ರಯಾಣಕ್ಕೆ ಕನಿಷ್ಟ ೩ ಟ್ರೈನ್ ಆದರೂ ಬೇಕು. ಈ ವಿಚಾರದಲ್ಲಿ ಕೇಂದ್ರ ಸರ್ಕಾರವನ್ನು ರಾಜ್ಯ ಸರ್ಕಾರ ಒತ್ತಾಯಿಸಬೇಕೆಂದು ದಕ್ಷಿಣ ಕನ್ನಡದ ಜನತೆಯ ಪರವಾಗಿ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಮನವಿಯನ್ನು ಕಳುಹಿಸುತ್ತೇನೆ.

14) ಕುಂದಾಪುರ ತಾಲ್ಲೂಕಿನ ಸೈಯದ್ ಯೂಸೂಫ್ ಮಯ್ಯೊಲ ದರ್ಗಾ ಧರ್ಮಗಂರುಗಳ ಮನೆ ಸಂಪೂರ್ಣವಾಗಿ ಸುಟ್ಟು ಹೋಗಿರುವ ಬಗ್ಗೆ

ಶ್ರೀ ಪ್ರತಾಪ ಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೆ, ಕುಂದಾಪುರ ತಾಲ್ಲೂಕಿನ, ಪುರಸಭೆಯ ವ್ಯಾಪ್ತಿಯಲ್ಲಿರುವ ಸೆಯ್ಯದ್ ಯೂಸುಫ್ ವಲಿಯುಲ್ಲಾ ದರ್ಗಾದ ಸ್ವಾಧೀನದಲ್ಲಿರತಕ್ಕಂತಹ ಧರ್ಮ ಗುರುಗಳು ವಾಸವಾಗಿರುವಂತಹ ಮನೆ ೨೨-೫-೮೮ ರಂದು ಮಧ್ಯಾಹ್ನ ೧೧-೨೦ ಗಂಟೆಗೆ ಬೆಂಕಿ ಅಕಸ್ಮಿಕದಿಂದ ಸಂಪೂರ್ಣ ಸುಟ್ಟು ಹೋಗಿರುತ್ತದೆ. ಮನೆಯಲ್ಲಿದ್ದ ದರ್ಗಾ ತಾಪ್ರದ ಎಲ್ಲಾ ಪಾತ್ರೆಗಳು ೨೫ ಸಾವಿರ ರೂಪಾಯಿಗಳು, ಬಟ್ಟೆ ಬರೆ ಸುಮಾರು ೫ ಸಾವಿರ ರೂಪಾಯಿ, ನಗದು ಸುಮಾರು ೧೦ ಸಾವಿರ ರೂಪಾಯಿ, ಮಂತ್ರ ಕುರ್ಜಿ ಮೇಜು ಎಲ್ಲಾ ದರ್ಗಾ ಸಾಮಾನುಗಳು ಸುಟ್ಟು ಹೋಗಿವೆ. ಸುಮಾರು ಇದರಿಂದ ೧ ಲಕ್ಷ ೨೦ ಸಾವಿರ ರೂಪಾಯಿಗಳು ನಷ್ಟವಾಗುತ್ತದೆ.

ಆದ ಕಾರಣ ಸರಕಾರ ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರ ಒದಗಿಸಿ ಕೊಡಬೇಕಾಗಿ ಸರಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಪರದಿಯನ್ನು ತರಿಸಿಕೊಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ಪ್ರತಾಪ ಚಂದ್ರಶೆಟ್ಟಿಯವರಿಗೂ ವಿಷಯ ಗೊತ್ತಿದೆ. ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಭೇಟಿ ಕೊಟ್ಟು ಬೆಂಕಿ ಅನಾಹುತವಾಯಿತು ಅಂತ ಹೇಳಿದ್ದಾರೆ. ಅವರು ಸ್ಥಳ ಪರಿಶೀಲನೆ ಮಾಡಿ ಈಗ ಹಾಲಿ ಇರತಕ್ಕ ನಿಯಮಾವಳಿಗಳ ಪ್ರಕಾರ ಪರಿಹಾರವನ್ನು ಕೊಡುವುದಕ್ಕೆ ಅವಕಾಶ ಇದೆ. ಆದರೂ ಪರಿಹಾರ ಸಿಕ್ಕದಿದ್ದರೆ ನಾಳೆಯೋ ಆಥವಾ ನಾಡಿದ್ದೋ ತಿಳಿಸಿದರೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

15) ಕುಟುಂಬ ಕಲ್ಯಾಣ ಇಲಾಖೆಯ ಉಡಳಿತಾಧಿಕಾರಿ ಶ್ರೀ ಜೋಷಿ ಅವರ ಮೇಲೆ ದೂರುಗಳನ್ನು ಗಮನಿಸಿ ಅಮಾನತ್ತಿನಲಿಡುವುದರ ಬಗ್ಗೆ

ಶ್ರೀ ಬಿ. ಸ್ವಾಮಿ ರಾವ್.— ಮಾನ್ಯ ಅಧ್ಯಕ್ಷರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಉಡಳಿತಾಧಿಕಾರಿಯಾಗಿ, ಕೆಲಸ ಮಾಡುತ್ತಿರುವ ಶ್ರೀ ಜೋಷಿ ಅವರ ಮೇಲೆ ವೈಯಕ್ತಿಕವಾಗಿ ಹಾಗೂ ಸಂಘಗಳ ಮೂಲಕ ಅನೇಕರು ದೂರು ಸಲ್ಲಿಸಿದ್ದು ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟ ಕಡತ ಹೋದ ಸಂದರ್ಭದಲ್ಲಿ ಮೇಲ್ನೋಟಕ್ಕೆ ಅವರ ಮೇಲಿನ ಆಪಾದನೆಗಳು ನಿಜವೆಂದು ಕಂಡು ಬಂದಿದ್ದರಿಂದ, ಮಾನ್ಯ ಮುಖ್ಯಮಂತ್ರಿಗಳು ಅವರ ಮೇಲೆ ಇಲಾಖಾ ವಿಚಾರಣೆಯನ್ನು ನಡೆಸಬೇಕೆಂದು ೯-೫-೮೮ರಂದು ಆದೇಶ ನೀಡಿದ್ದಾಗ್ಯೂ ಸದರಿ ಕಡತ ಸಚಿವಾಲಯದ ಆರೋಗ್ಯ ಕಾರ್ಯದರ್ಶಿಗಳ ಕಛೇರಿಯಲ್ಲೇ ಉಳಿದಿರುವುದಾಗಿ ತಿಳಿದು ಬಂದಿದೆ. ಇದರ ಮೇಲೆ ಅನೇಕ ಭ್ರಷ್ಟಾಚಾರ ಪ್ರಕರಣಗಳು ಹಾಗೂ ಅಧಿಕಾರದುರುಪಯೋಗದ ಪ್ರಕರಣಗಳು ಬಹಳ ಇದ್ದು, ಇವರ ಬಗ್ಗೆ ಕೂಲಂಕಷವಾದ ತಳಿಪೆ ನಡೆದು ಅದರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಇದ್ದಾಗ್ಯೂ ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯದಲ್ಲಿ ನಿರಾಸಕ್ತಿ ಹೊಂದಿದ್ದಾರೆ. ಇವರ ಭ್ರಷ್ಟಾಚಾರದ ಬಗ್ಗೆ ಒಂದು ನಿದರ್ಶನ ಕೊಡುವುದಾದರೆ ಇಲಾಖೆಯಲ್ಲಿ ಸ್ಟಾಫ್ ನರ್ಸಗಳಾಗಿ ಕೆಲಸ ಮಾಡುತ್ತಿದ್ದ ೩೬ ಮಂದಿ ಇಲಾಖಾ ಅನುಮತಿ ಇಲ್ಲದೆ ಸೌದಿ ಅರೇಬಿಯಾಕ್ಕೆ ಹೋಗಿ ಹಿಂದಿರುಗಿದ ನಂತರ ಅವರ ಮೇಲೆ ವಿಚಾರಣೆ ನಡೆಸಬೇಕೆಂದು ಆದೇಶ ಇದ್ದಾಗ್ಯೂ, ವಿಚಾರಣೆ ನಡೆಸದೆ ಅವರಿಂದ ಲಂಚ ಪಡೆದು ಅವರನ್ನು ಪುನಃ ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಇಂತಹ ಪ್ರಕರಣಗಳು